ಅನುಬಂಧ–2

ಶಿವಮೊಗ್ಗ ಜಿಲ್ಲೆಯಲ್ಲಿ ಸುತ್ತುನಿಧಿ ನೀಡಿರುವ ಗುಂಪುಗಳ ತಾಲ್ಲೂಕುವಾರು ವಿವರ

ಕ್ರ.ಸಂ.	ತಾಲ್ಲೂಕುಗಳ ಹೆಸರು	ರಚನೆಯಾದ ಗುಂಪುಗಳ ಸಂಖ್ಯೆ	ಸುತ್ತುನಿಧಿ ನೀಡಿರುವ ಗುಂಪುಗಳ ಸಂಖ್ಯೆ
1.	ಶಿವಮೊಗ್ಗ	425	425
2.	ಭದ್ರಾವತಿ	509	509
3.	ಸಾಗರ	400	400
4.	ಸೊರಬ	455	455
5.	ಶಿಕಾರಿಪುರ	604	604
6.	ಹೊಸನಗರ	215	215
7.	ತೀರ್ಥಹಳ್ಳಿ	380	380
	ಒಟ್ಟು	2988	2988

515(340) ಶ್ರೀ ಬಸವಣ್ಣೆಪ್ಪ ಜಿ (ಹೊಳೆಹೊನ್ನೂರು) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000 ದಿಂದ 2004ರ ವರೆಗೆ ಪಡಿತರ ವಿತರಣಾ ವ್ಯವಸ್ಥೆಗಾಗಿ ಸರ್ಕಾರವು ಒದಗಿಸಿರುವ ಸಬ್ಸಿಡಿ ಹಣದ ಮೊತ್ತ ಎಷ್ಟು; (ವರ್ಷಾವಾರು ವಿವರ ನೀಡುವುದು)

ಆ) ಪ್ರಸ್ತುತ ಸಾಲಿಗೆ ಒದಗಿಸಿರುವ ಸಬ್ಸಿಡಿ ಮೊತ್ತವೆಷ್ಟು;

ಇ) ಸಬ್ಸಿಡಿ ಮೊತ್ತವನ್ನು ಕಡಿತಗೊಳಿಸುವ ಪ್ರಸ್ತಾಪವು ಸರ್ಕಾರದ ಮುಂದೆ ಇದೆಯೇ;

ಈ) ಇದ್ದಲ್ಲಿ, ಕಾರಣವೇನು (ವಿವರಣೆ ನೀಡುವುದು);

ಉ) ಪಡಿತರ ವಿತರಣಾ ವ್ಯವಸ್ಥೆಗೆ ನೀಡಲಾಗುತ್ತಿರುವ ಸಬ್ಸಿಡಿ ಮೊತ್ತವು ಅರ್ಹ ಫಲಾನುಭವಿಗಳಿಗೆ ದೊರಕುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಬಂದಿದ್ದಲ್ಲಿ, ಕಾರಣವೇನು ವಿವರಣೆ ನೀಡುವುದು;

ಋ) ಸಬ್ಸಿಡಿ ಮೊತ್ತ ಅರ್ಹ ಫಲಾನುಭವಿಗಳಿಗೆ ದೊರಕುವಂತೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ)

	00–01	01–02	02–03	03–04
ಮಂಜೂರಾದ ಸಹಾಯಧನ	271.24	223.00	173.00	159.70
ಆಯವ್ಯಯ ಸಾಗಾಣಿಕೆ	28.82	27.00	27.00	42.00
ಖರ್ಚಾದ ವೆಚ್ಚಸಹಾಯ ಧನ	248.41	173.33	134.12	157.42
ಸಾಗಾಣಿಕೆ	46.62	32.47	41.63	65.04

ಆ) 2004–05ರ ಆಯವ್ಯಯದಲ್ಲಿ ಒಟ್ಟು 540 ಕೋಟಿ ರೂಪಾಯಿ ಸಹಾಯಧನ ಎಂದು ಕಾಯ್ದಿರಿಸಲಾಗಿದ್ದು, ಈ ಪೈಕಿ ಇದುವರೆಗೆ ಒಟ್ಟು 485 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಈ ಪೈಕಿ ನವೆಂಬರ್ 2004 ರವರೆಗೆ ಸಹಾಯಧನ ಸಾಗಾಣಿಕೆ ವೆಚ್ಚ ಇತ್ಯಾದಿಗೆ ರೂ. 421 ಕೋಟಿ ಖರ್ಚಾಗಿದೆ.

ಇ) ಇಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಬಂದಿದೆ. ವಿಶೇಷ ಕಾರ್ಯಕ್ರಮ ಹಮ್ಮಿಕೊಂಡು ಆಗಸ್ಟ್ ತಿಂಗಳ ದಿನಾಂಕ 1 ರಿಂದ, ಡಿಸೆಂಬರ್ 2004ರ ಆಖೈರವರೆಗೆ ಒಟ್ಟು 8,54,583 ಅನರ್ಹ ಕಾರ್ಡುಗಳನ್ನು ಪತ್ತೆಹಚ್ಚಿ ರದ್ದುಪಡಿಸಿದೆ.

ಊ) 2000ರಲ್ಲಿ ರಾಜ್ಯದಲ್ಲಿ ಮನೆ ಮನೆ ಸಮೀಕ್ಷೆ ಮೂಲಕ ಅರ್ಹ ಫಲಾನುಭವಿಗಳನ್ನು ಗುರುತಿಸಲು ಕಾರ್ಯಕೈಗೊಂಡು ಇಲಾಖೆಯಿಂದ ಒಟ್ಟು 47 ಲಕ್ಷ ಫಲಾನುಭವಿಗಳನ್ನು ಗುರುತಿಸಲಾಯಿತು. ಈ ಯೋಜನೆಯನ್ನು ಜಾರಿಗೊಳಿಸುವ ಹಂತದಲ್ಲಿ ಅನೇಕ ಅರ್ಹ ಫಲಾನುಭವಿಗಳನ್ನು ಕೈ ಬಿಡಲಾಗಿದೆ ಎಂಬ ದೂರಿನಿಂದಾಗಿ ಹೊಸದಾಗಿ ಅರ್ಜಿಗಳನ್ನು ಕರೆಯಬೇಕೆಂದು ಸರ್ಕಾರವು ತೀರ್ಮಾನಿಸಿತು. ಜೂನ್ 2003ರವರೆಗೆ 36 ಲಕ್ಷ ಅರ್ಜಿಗಳು ಸ್ವೀಕೃತಿಯಾಗಿದ್ದು, ಈ ಪೈಕಿ 20 ಲಕ್ಷ ಅರ್ಜಿಗಳನ್ನು ಪರಿಶೀಲಿಸಿ ತಾತ್ಕಾಲಿಕ ಹಳದಿ ಪಡಿತರ ಚೀಟಿ ಮತ್ತು ತಾತ್ಕಾಲಿಕ ಗುರುತಿನ ಪಡಿತರ ಚೀಟಿಗಳನ್ನು ನೀಡಲಾಯಿತು. ಆದರೂ, ಇನ್ನೂ ಅನೇಕ ಅರ್ಹ ಕುಟುಂಬದವರು ಈ ಪಟ್ಟಿಯಲ್ಲಿ ಸೇರ್ಪಟ್ಟಿಲ್ಲವೆಂಬ ಕಾರಣದಿಂದ ಸರ್ಕಾರವು ಪಡಿತರ ಚೀಟಿ ನೀಡಲು ಆದೇಶಿಸಿದ್ದರಿಂದ ಹಸಿರು ಪಡಿತರ ಚೀಟಿ ಪಡೆದುಕೊಂಡು ತಾತ್ಕಾಲಿಕ ಗುರುತಿನ ಚೀಟಿಗಳನ್ನು ನೀಡಲಾಗಿರುತ್ತದೆ. ಈ ಅಂಶಗಳ ಹಿನ್ನೆಲೆಯಲ್ಲಿ ಹಳದಿ ಪಡಿತರ ಚೀಟಿ ಫಲಾನುಭವಿಗಳ ಪಟ್ಟಿಯಲ್ಲಿ ಅನರ್ಹ ಫಲಾನುಭವಿಗಳು ಸೇರಿರುವ ಸಾಧ್ಯತೆಯಿರುತ್ತದೆ.

ಋ) ಅನರ್ಹ ಕುಟುಂಬಗಳಿಗೆ ನೀಡಿರುವ ಪಡಿತರ ಚೀಟಿಗಳನ್ನು ಗುರುತಿಸಿ ಅವುಗಳನ್ನು ರದ್ದುಗೊಳಿಸುವುದು ಹಾಗೂ ಅರ್ಹ ಕುಟುಂಬಗಳಿಗೆ ಪಡಿತರ

ಚೀಟಿಯನ್ನು ವಿತರಿಸಲು ರಾಜ್ಯದಲ್ಲಿ ಮರು ಸಮೀಕ್ಷೆ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಆವಾಸ 114 ಡಿಆರ್‌ಎ 04 ದಿನಾಂಕ 10–1–2005ರಂದು ಆದೇಶಿಸಿರುತ್ತದೆ. ಈಗಾಗಲೇ ರಾಜ್ಯಾದ್ಯಂತ ಪುನರ್ ಸಮೀಕ್ಷೆ ಪ್ರಾರಂಭವಾಗಿದ್ದು ಇದು ಏಪ್ರಿಲ್, 2005ಕ್ಕೆ ಪೂರ್ಣವಾಗುವ ನಿರೀಕ್ಷೆಯಿರುತ್ತದೆ.

516(342) ಶ್ರೀ ಬಸವಣ್ಣೆಪ್ಪ ಜಿ (ಹೊಳೆಹೊನ್ನೂರು) ಮಾನ್ಯ ಆಹಾರ ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಅರ್ಹ ಬಡ ಕುಟುಂಬಗಳನ್ನು ಗುರುತಿಸಲು ಸಮೀಕ್ಷೆಯನ್ನು ಕೈಗೊಂಡಿರುವುದು ನಿಜವೇ;

ಆ) ಹಾಗಿದ್ದಲ್ಲಿ ಕಾರ್ಯ ಪೂರ್ಣಗೊಳ್ಳುವುದು ಯಾವಾಗ;

ಇ) ಈ ಸಮೀಕ್ಷೆಗೆ ತಗಲುವ ಅಂದಾಜು ವೆಚ್ಚ ಎಷ್ಟು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಜನವರಿ 2005ರಿಂದ ಅರ್ಹ ಬಡ ಕುಟುಂಬಗಳನ್ನು ಹಾಗೂ ಅನರ್ಹರನ್ನು ಗುರುತಿಸಲು ಪುನರ್ ಸಮೀಕ್ಷೆ ಕೈಗೊಳ್ಳಲಾಗಿದೆ.

ಆ) ದಿನಾಂಕ 30–4–2005ಕ್ಕೆ ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ.

ಇ) ರೂ. 87,50,000/– ಖರ್ಚು ಇಂಧನ, ರಿಜಿಸ್ಟರುಗಳು ಹಾಗೂ contingency, ಪ್ರತಿ ತಾಲ್ಲೂಕಿಗೆ ರೂ. 50,000/–ರಂತೆ ತಗಲುವುದೆಂದು ಅಂದಾಜಿಸಲಾಗಿದೆ.

518(346) ಶ್ರೀ ಬಸವಣ್ಣೆಪ್ಪ ಜಿ (ಹೊಳೆಹೊನ್ನೂರು) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಿನಾಂಕ 31–3–2004 ರವರೆಗೆ ರಾಜ್ಯದಲ್ಲಿರುವ ಕುಟುಂಬಗಳ ಸಂಖ್ಯೆ ಎಷ್ಟು;

ಆ) ಇದರಲ್ಲಿ ಪಡಿತರ ಚೀಟಿ ಪಡೆದಿರುವವರೆಷ್ಟು (ಹಳದಿ ಮತ್ತು ಕೇಸರಿ ಕಾರ್ಡು ಹೊಂದಿರುವವರ ಪ್ರತ್ಯೇಕ ಪಟ್ಟಿ ನೀಡುವುದು);

ಇ) ಈವರೆವಿಗೂ ವಿತರಿಸಿರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಈ) ಇದರಲ್ಲಿ ನಕಲಿ ಪಡಿತರ ಚೀಟಿಗಳೆಷ್ಟು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 2001ನೇ ಸಾಲಿನ ಜನಗಣತಿಯನ್ವಯ ರಾಜ್ಯದಲ್ಲಿರುವ ಕುಟುಂಬಗಳ ಸಂಖ್ಯೆ